# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:17.12.2022 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ.40 (ವೀರಮದಕರಿ) ರಲ್ಲಿ ನೋಡಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

**ಹಾಜರಿದ್ದವರು:-**

| ಕ್ರಮ ಸಂಖ್ಯೆ | ಅಧ್ಯಕ್ಷರು / ಸದಸ್ಯರ ಹೆಸರು | ಪದನಾಮ / ಇಲಾಖೆ |
|---|---|---|
| 1 | ಶ್ರೀ ನಾಗಭೂಷಣ್ ಜಿ. | ಸ.ಕಾ.ನಿ.ಅ., ಎಡಿಟಿಪಿ, ವಾರ್ಡ್ ನೋಡಲ್ ಅಧಿಕಾರಿಗಳು |
| 2 | ಪೂಜಾಶ್ರೀ ಆರ್. | ಸಹಾಯಕ ಅಭಿಯಂತರರು, |
| 3 | ಎಂ. ಅನಿತಾ ರಾಜು | ಕಿರಿಯ ಆರೋಗ್ಯ ಪರಿವೀಕ್ಷಕರು |
| 4 | ಭರತ್ ಕುಮಾರ್ ಎನ್. | ಕಿರಿಯ ಆರೋಗ್ಯ ಪರಿವೀಕ್ಷಕರು |
| 5 | ಡಿ.ಟಿ. ಶ್ರೀನಿವಾಸ್ | ಸೂಪರ್‌ವೈಸರ್ |
| 6 | ಎನ್ ನಾಗರಾಜು | ಸೂಪರ್‌ವೈಸರ್ |

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಅಧಿಕಾರಿಗಳು / ಹಾಜರಿದ್ದವರ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

**1) ಕಾಮಗಾರಿ ಇಲಾಖೆ:**

ವಾರ್ಡ್ ವ್ಯಾಪ್ತಿಯ ರಸ್ತೆ ಗುಂಡಿಗಳನ್ನು ಹೆಚ್ಚಾಗಿದ್ದು, ಅದನ್ನು ಮುಚ್ಚಿಸಲು ನೋಡಲ್ ಅಧಿಕಾರಿಗೆ ಜಾಲಹಳ್ಳಿ ಗ್ರಾಮಸ್ಥರು ಹೇಳಿದರು.

ವಾರ್ಡ್ ವ್ಯಾಪ್ತಿಯಲ್ಲಿನ ರೋಡ್ ರಿಪೇರಿ, ಸ್ಲಾಬ್ ವರ್ಕ್ಸ್ ನ್ನು ಪಿ ಒ ಡಬ್ಲ್ಯೂ ಕಾಮಗಾರಿಗಳಲ್ಲಿ ಸೇರಿಸಲಾಗಿದೆ ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿರುತ್ತಾರೆ.

ಸೆಂಟ್ ಕ್ಲಾರೆಟ್ ಸ್ಕೂಲ್ ಹತ್ತಿರ, ರಾಜಕಾಲುವೆ ಮೇಲಿನ ಸ್ಲಾಬ್ ಸರಿಯಾಗಿ ಇರದೇ ಇರುವುದರಿಂದ ಸರಿಪಡಿಸಲು ತಿಳಿಸಿದರು.

**2) ಬ್ಲ್ಯಾಕ್ ಸ್ಪಾಟ್ (ಘನತ್ಯಾಜ್ಯ) ಗಳ ನಿರ್ವಹಣೆ:-**

ಜಾಲಹಳ್ಳಿ ವಾರ್ಡ್‌ನಲ್ಲಿ ತ್ಯಾಜ್ಯ ನಿರ್ವಹಣೆಯ ಬಗ್ಗೆ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ, ವಾರ್ಡ್‌ನಲ್ಲಿ ಪ್ರತಿದಿನ ಕಸ ವಿಲೇವಾರಿ ಕಾರ್ಯವು ಸಮರ್ಪಕವಾಗಿ ನಿರ್ವಹಿಸುತ್ತಿರುವುದಾಗಿ ತಿಳಿಸಿರುತ್ತಾರೆ.

ಮಾನ್ಯ ಅಧ್ಯಕ್ಷರು ಮಾತನಾಡಿ ಬ್ಲ್ಯಾಕ್ ಸ್ಪಾಟ್ ಸ್ಥಳಗಳಲ್ಲಿ ಔಷಧಿ ಸಿಂಪಡಣೆ ಮಾಡಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಲಾಗಿರುತ್ತದೆ. ಘನತ್ಯಾಜ್ಯ ಇಲಾಖೆಯ ನಿರ್ವಹಣೆ ಅಧಿಕಾರಿಗಳು ಮತ್ತು ಮೇಲ್ವಿಚಾರಕರು ಬ್ಲ್ಯಾಕ್‌ಸ್ಪಾಟ್ ಸ್ಥಳಗಳಲ್ಲಿ ರಾತ್ರಿ ಹೊತ್ತು ಕಸ ಸುರಿಯುವವರಿಗೆ ದಂಡ ವಿಧಿಸಲು ಸಭೆಯಲ್ಲಿ

ಸೂಚಿಸಿರುತ್ತಾರೆ. ಹಾಗೂ ವಾರ್ಡ್ ಪರಿಮಿತಿಯಲ್ಲಿ ಸಂಗ್ರಹವಾಗುವಂತಹ ತ್ಯಾಜ್ಯಗಳನ್ನು ವಿಂಗಡಿಸಿ (ಒಣ ಕಸ ಮತ್ತು ಹಸಿ ಕಸ) ವಿಲೇವಾರಿ ಮಾಡಲು ಸೂಚಿಸಿರುತ್ತಾರೆ.

3) ಬೀದಿ ದೀಪಗಳ ಬಗ್ಗೆ:

ಸೆಂಟ್ ಕ್ಲಾರೆಟ್ ಸ್ಕೂಲ್ ಮತ್ತು ಶಾರದಾಂಬನಗರ 5ನೇ, 6ನೇ ಮತ್ತು 8ನೇ ಅಡ್ಡರಸ್ತೆಗಳಲ್ಲಿ ಬೀದಿದೀಪಗಳು ಹತ್ತಿರ ಉರಿಯುತ್ತಿರುವುದಿಲ್ಲ. ಹೋಲಿ ಏಂಜೆಲ್ ಸ್ಕೂಲ್ ಹತ್ತಿರ ಹೊಸ ಬೀದಿ ದೀಪಗಳನ್ನು ಅಳವಡಿಸಿಕೊಳ್ಳಲು ಸಾರ್ವಜನಿಕರು ಹೇಳಿದರು. ದೂರವಾಣಿ ಮುಖಾಂತರ ಸ್ಟ್ರೀಟ್ ಲೈಟ್ ಮೇಂಟೆನೆನ್ಸ್ ರವರಿಗೆ ಎ.ಇ. ರವರು ತಿಳಿಸಿರುತ್ತಾರೆ.

ಕೊನೆಯದಾಗಿ, ಅಧ್ಯಕ್ಷರು ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರ ಸಮಸ್ಯೆ / ದೂರುಗಳನ್ನು ದಾಖಲಿಸಲು ವಾರ್ಡ್ ನಲ್ಲಿ ದೂರು ದಾಖಲಿಸುವ ಪುಸ್ತಕ ಲಭ್ಯವಿರುವಂತೆ ನೋಡಿಕೊಂಡು ಬರುವ ದೂರುಗಳನ್ನು ಆದ್ಯತೆಯ ಮೇರೆಗೆ ಕ್ರಮವಹಿಸುವಂತೆ ಹಾಗೂ ಪ್ರತಿ ವಾರ ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮವನ್ನು ಮುಂದುವರೆಸುಂತೆ ಸೂಚಿಸುತ್ತಾ, ಸಕಾಲದಲ್ಲಿ ಸಾರ್ವಜನಿಕ ಕುಂದುಕೊರತೆಗಳಗೆ ಸ್ಪಂದಿಸಿ ಪರಿಹರಿಸಲು ಕ್ರಮ ಕೈಗೊಂಡು ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು.

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಸಲಾಯಿತು.

Poojashree.R
ಸದಸ್ಯ ಕಾರ್ಯದರ್ಶಿ
ವಾರ್ಡ್ ಸಂಖ್ಯೆ:40

(ನಾಗಭೂಷಣ್ ಜಿ.)
ಸ.ಕಾ.ನಿ.ಅ. ಎಡಿಟಿಪಿ ಹಾಗೂ
ವಾರ್ಡ್ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ:40